ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೧೯೮೮-೮೯ ...ರೂ. ೪೧,೧೭,೦೦೦-೦೦
೧೯೮೯-೯೦ ...ರೂ. ೬೫,೭೧,೫೬೧-೦೦

ಆ) ಹೌದು.

ಇ) ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರನ್ನು ಅಮಾನತ್ತಿನಲ್ಲಿಡಲಾಗಿದೆ ಮತ್ತು ನಿಯಮಗಳ ಪ್ರಕಾರ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಈ) ಅವ್ಯವಹಾರಗಳು ಗಮನಕ್ಕೆ ಬಂದಿಲ್ಲ.

ಬಿಡ್ ಶೀಟ್ ...ರೂ. ೩೪೨೩೭೫-೦೦
ಬ್ಯಾಂಡೇಜ್ ಅರಿವೆ ...ರೂ. ೬೧೦೨೪೦-೦೦

ಒಟ್ಟು ರೂ. ೯೫೨೬೧೫-೦೦

ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅವ್ಯವಸ್ಥೆ

೮೬೬ (೧೦೧೬) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಮೈಸೂರು ನಗರದ ಕೆ.ಆರ್. ಆಸ್ಪತ್ರೆಯಲ್ಲಿನ ಅವ್ಯವಸ್ಥೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಆಸ್ಪತ್ರೆಯಲ್ಲಿ ಔಷಧಿ ಮತ್ತು ಅಗತ್ಯ ಉಪಕರಣಗಳ ಕೊರತೆಗೆ ಕಾರಣವೇನು ?

ಈ) ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬಕಲ್ಯಾಣ ಮಂತ್ರಿಗಳು).—

ಅ) ಗಂಭೀರ ಸ್ವರೂಪದ ಅವ್ಯವಸ್ಥೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಔಷಧಿಯ ಕೊರತೆ ಇರುವುದಿಲ್ಲ. ಕೆಲ ಉಪಕರಣಗಳ ಅವಶ್ಯಕತೆ ಇದೆ. ಸಾಕಷ್ಟು ದಾಸ್ತಾನು ಇದೆ.

ಈ) ಹಣದ ಲಭ್ಯತೆಯ ಪ್ರಕಾರ ಉಪಕರಣಗಳನ್ನು ಒದಗಿಸಲಾಗುವುದು.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತಯಾರಿಸುತ್ತಿದ್ದ ಔಷಧದ ಬಗ್ಗೆ

೮೬೭(೧೦೧೭) ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ತಯಾರಾಗುತ್ತಿದ್ದ ಶೇ. ೫ ಇಂಟ್ರಾವೀನಸ್ ಗ್ಲೂಕೋಸ್ ತಯಾರಿಕೆ ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದರ ನಿಲುಗಡೆಯಿಂದ ರೋಗಿಗಳಿಗೆ ಆಗುತ್ತಿರುವ ತೀವ್ರ ತೊಂದರೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದನ್ನು ಮತ್ತೆ ಪ್ರಾರಂಭಿಸಲು ಕೈಗೊಳ್ಳಲಿರುವ ಕ್ರಮಗಳೇನು?